# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 26.08.2022 ರಂದು ಬೆಳಿಗ್ಗೆ: 11:30 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯ ಮಾನ್ಯ ಕುಲಪತಿಯವರ ಕೊಠಡಿಯಲ್ಲಿ ನಡೆದ 2021–22ನೇ ಸಾಲಿನ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಸಿಂಡಿಕೇಟ್ ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ವೆಂಕಟೇಶ್ವರಲು ಎಂ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 3. | ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು–572102. | ಸದಸ್ಯರು |
| 4. | ಶ್ರೀ ಪ್ರಸನ್ನಕುಮಾರ್<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560009. | ಸದಸ್ಯರು |
| 5. | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ<br>ನಂ. 472, 'ಶ್ರೀ ನಿರ್ಮಲ ನಿಲಯ', 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು–560072. | ಸದಸ್ಯರು |
| 6. | ಶ್ರೀ ರಾಜು<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ, ತಿಪಟೂರು–572201. ತುಮಕೂರು ಜಿಲ್ಲೆ. | ಸದಸ್ಯರು |
| 7. | ಶ್ರೀ ಟಿ.ಡಿ. ವಿನಯ್,<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ, ತುಮಕೂರು–572105. | ಸದಸ್ಯರು |
| 8. | ಡಾ. ಕೇಶವ, ಹಿರಿಯ ಡೀನರು,<br>ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 9. | ಡಾ. ಪಾಟೀಲ್ ಮಲ್ಲಿಕಾರ್ಜುನ ಬಿ.<br>ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು | ಸದಸ್ಯರು |
| 10. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 11. | ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 12. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು**

| | | |
|---|---|---|
| 1 | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 2 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4 | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5. | ಶ್ರೀಮತಿ ಎಂ.ಎಸ್. ಭವ್ಯ<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್, ಬೆಂಗಳೂರು–560064. | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ:26.08.2022 ಶುಕ್ರವಾರ ಬೆಳಿಗ್ಗೆ 11:30ಕ್ಕೆ ನಡೆದ 2021-22ನೇ ಸಾಲಿನ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಗೆ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು ಹಾಗೂ ಮಾನ್ಯ ಕುಲಸಚಿವರು ತುಮಕೂರು ವಿಶ್ವವಿದ್ಯಾನಿಲಯಕ್ಕೆ ನೂತನವಾಗಿ ಆಗಮಿಸಿದ ಮಾನ್ಯ ಕುಲಪತಿಗಳಾದ ಪ್ರೊ. ಎಂ. ವೆಂಕಟೇಶ್ವರಲು ರವರನ್ನು ಹಾಗೂ ನೂತನವಾಗಿ ಹಣಕಾಸು ಅಧಿಕಾರಿಯಾಗಿ ನಿಯೋಜನೆಗೊಂಡಿರುವ ಶ್ರೀ ರೇವಣ್ಣ ರವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಮಾನ್ಯ ಕುಲಸಚಿವರು ಕಾರ್ಯಸೂಚಿಗಳ ಮಂಡಿಸಿ, ಈ ಬಗ್ಗೆ ಚರ್ಚಿಸಿ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ.ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ:15.06.2022 ರಂದು ನಡೆದ ಐದನೇ ಸಾಮಾನ್ಯ ಸಿಂಡಿಕೇಟ್ ಹಾಗೂ ದಿನಾಂಕ:02.07.2022 ರಂದು ನಡೆದ ಎರಡನೇ ವಿಶೇಷ ಸಿಂಡಿಕೇಟ್ ಸಭೆಗಳ ನಡಾವಳಿಗಳ ದೃಢೀಕರಣ.<br>• ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ವಾರ್ಷಿಕ ಆಯ-ವ್ಯಯದಲ್ಲಿ ಅಧ್ಯಯನ ಪೀಠಗಳಿಗೆ ಹಣವನ್ನು ಮೀಸಲಿರಿಸಲು ನಿರ್ಣಯಿಸಲಾಗಿತ್ತು, ಆದರೆ ಮೀಸಲಿರಿಸುವ ಎಂಬ ಪದದ ಬದಲಾಗಿ 'ನಿಶ್ಚಿತ ಠೇವಣಿ' ಎಂದು ಬದಲಿಸಲು ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. ಇವರು ಸಭೆಯಲ್ಲಿ ಪ್ರಸ್ತಾಪಿಸಿದರು, ಇದಕ್ಕೆ ಸಭೆಯು ಒಪ್ಪಿತು.<br>• ಅಂತರ ವಿಶ್ವವಿದ್ಯಾನಿಲಯದ ಕ್ರೀಡಾ ಕೂಟ ಮತ್ತು ರಾಜ್ಯಮಟ್ಟದ ಯಾವುದಾದರೂ ಮೂರು ಪ್ರಮುಖ ಕ್ರೀಡಾಕೂಟಗಳಿಗೆ ಸಂಬಂಧಿಸಿದಂತೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಅಕ್ಟೋಬರ್-2022ರೊಳಗೆ ಆಯೋಜಿಸಲು ಕ್ರಮ ಕೈಗೊಳ್ಳುವಂತೆ, ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಪ್ರಸನ್ನಕುಮಾರ್ ಸಭೆಗೆ ತಿಳಿಸಿದರು ಈ ಕುರಿತು ಸಿಂಡಿಕೇಟ್ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಸಂಬಂಧಪಟ್ಟ ವಿಭಾಗಕ್ಕೆ ಕ್ರಮವಹಿಸುವಂತೆ ಆದೇಶಿಸುವುದಾಗಿ ತಿಳಿಸಿದರು. | | | |
| ಸಿಬ್ಬಂದಿ ವಿಭಾಗ | | | |
| 1. | 2021-22.ಸಾ.ಸಿಂ.06<br>ಸಿ.ವಿ-01 | ಸಹಾಯಕ ಪ್ರಾಧ್ಯಾಪಕರು ಹಾಗೂ ತತ್ಸಮಾನ ವೃಂದದ ಶೈಕ್ಷಣಿಕ ಸಿಬ್ಬಂದಿಗೆ ಯು.ಜಿ.ಸಿ - ಸಿ.ಎ.ಎಸ್ ಅಡಿಯಲ್ಲಿ Academic Level 11 ರಿಂದ Academic Level 12 ಕ್ಕೆ ಪದೋನ್ನತಿ ನೀಡುವ ಕುರಿತು. | ಸಹಾಯಕ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ-ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಈ ಹಿಂದೆ ಅನುಸರಿಸಿರುವ ಕ್ರಮದಂತೆ ಹಾಗೂ ಸರ್ಕಾರದ ಆದೇಶದಂತೆ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 2. | 2021-22.ಸಾ.ಸಿಂ.06<br>ಸಿ.ವಿ-02 | ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನಾ (ಎನ್.ಎಸ್.ಎಸ್) ಘಟಕಕ್ಕೆ ನೇಮಕಗೊಂಡಿರುವ ನೌಕರರ ಸೇವೆಯನ್ನು ಮುಂದುವರೆಸುವ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನಾ (ಎನ್.ಎಸ್.ಎಸ್) ಘಟಕಕ್ಕೆ ನೇಮಕಾತಿಗಾಗಿ ತುರ್ತಾಗಿ ಜಾಹೀರಾತು ಪ್ರಕಟಣೆ ಹೊರಡಿಸಿ ಅರ್ಹ ಅಭ್ಯರ್ಥಿಯನ್ನು ನೇಮಕಾತಿ ಮಾಡಿಕೊಳ್ಳುವುದು. ಅಲ್ಲಿಯವರೆಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶ್ರೀ ಸಿದ್ದಾರ್ಥ್ ಎಂ. ಇವರ ಸೇವೆಯನ್ನು ಮುಂದಿನ ನೇಮಕಾತಿಯವರೆವಿಗೂ ಮುಂದುವರೆಸುವುದು ಹಾಗೂ ಸದರಿಯವರಿಗೆ ಬಾಕಿಯಿರುವ ವೇತನವನ್ನು ಪಾವತಿಸಲು ಸಭೆಯು ತೀರ್ಮಾನಿಸಿತು. |

| | | | |
|---|---|---|---|
| 3. | 2021–22.ಸಾ.ಸಿಂ.06 ಸಿ.ವಿ–03 | ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೇಮಕಗೊಂಡು ನಂತರದಲ್ಲಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ ವಿಲೀನಗೊಂಡು ಕಾರ್ಯನಿರ್ವಹಿಸಿ, ವಯೋನಿವೃತ್ತರಾದ ಡಾ. ರಂಗನಾಥ ಟಿ.ಆರ್, ಸಹಪ್ರಾಧ್ಯಾಪಕರು ಇವರಿಗೆ ನಿವೃತ್ತಿ ಉಪದಾನ, ಗಳಿಕೆ ರಜೆ ನಗದೀಕರಣ ಹಾಗೂ ಇತರೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಿರುವುದನ್ನು ಸ್ಥಿರೀಕರಿಸುವ ಕುರಿತು. | ಸದರಿ ವಿಷಯದ ಸುಧೀರ್ಘವಾಗಿ ಚರ್ಚಿಸಿದ ಸಭೆಯು ಡಾ. ರಂಗನಾಥ ಟಿ.ಆರ್, ಸಹಪ್ರಾಧ್ಯಾಪಕರು ಇವರಿಗೆ ನಿವೃತ್ತಿ ಉಪದಾನ, ಗಳಿಕೆ ರಜೆ ನಗದೀಕರಣ ಹಾಗೂ ಇತರೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಿತು. |
| 4. | 2021–22.ಸಾ.ಸಿಂ.06 ಸಿ.ವಿ–04 | ಪಿಹೆಚ್.ಡಿ/ಎಂ.ಫಿಲ್. ಪದವಿ ಹೊಂದಿರುವ ಸಹಾಯಕ ಪ್ರಾಧ್ಯಾಪಕರು/ಸಹಾಯಕ ಗ್ರಂಥಪಾಲಕರು/ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರಿಗೆ ಪಿಹೆಚ್.ಡಿ/ಎಂ.ಫಿಲ್. ಮುಂಗಡ ವೇತನ ಬಡ್ತಿಗಳ ಮಂಜೂರಾತಿ ಹಾಗೂ ಸಿ.ಎ.ಎಸ್ ಅಡಿಯಲ್ಲಿ ಸ್ಥಾನೀಕರಣ ಎರಡೂ ಸೌಲಭ್ಯವನ್ನು ವಿಸ್ತರಿಸುವ ಸಂಬಂಧ ಸ್ಥಾನೀಕರಣ ದಿನಾಂಕವನ್ನು ಪರಿಷ್ಕರಿಸುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಈ ಸಂಬಂಧ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | **ಇಂಜಿನಿಯರಿಂಗ್ ವಿಭಾಗ** | |
| 5. | 2021–22.ಸಾ.ಸಿಂ.06 ಇಂ.ವಿ–01 | ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಹೆಲಿಪ್ಯಾಡ್‌ಗಳನ್ನು ತೆರವುಗೊಳಿಸುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಲ್ಲಾ ಹೆಲಿಪ್ಯಾಡ್‌ಗಳನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳಿಗೆ ಪತ್ರದ ಮುಖೇನ ತಿಳಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. |
| 6. | 2021–22.ಸಾ.ಸಿಂ.06 ಇಂ.ವಿ–02 | ತುಮಕೂರು ವಿಶ್ವವಿದ್ಯಾನಿಲಯದ ನೂತನ ಕ್ಯಾಂಪಸ್ ಆವರಣದಲ್ಲಿ Academic Block-1 ಕಟ್ಟಡ ಕಾಮಗಾರಿಯನ್ನು ನಿರ್ವಹಿಸುತ್ತಿರುವ ರೈಟ್ಸ್ ಸಂಸ್ಥೆಯು ಪಾವತಿಗಾಗಿ ಸಲ್ಲಿಸಿರುವ ಬಿಲ್ಲುಗಳ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ನೂತನ ಕ್ಯಾಂಪಸ್ ಆವರಣದಲ್ಲಿ Academic Block-1 ಕಟ್ಟಡ ಕಾಮಗಾರಿಯನ್ನು ನಿರ್ವಹಿಸುತ್ತಿರುವ ರೈಟ್ಸ್ ಸಂಸ್ಥೆಯು ಪಾವತಿಗಾಗಿ ಸಲ್ಲಿಸಿರುವ ರೂ.14,13,02,564.00(ರೂಪಾಯಿ ಹದಿನಾಲ್ಕು ಕೋಟಿ ಹದಿಮೂರು ಲಕ್ಷದ ಎರಡು ಸಾವಿರದ ಐದುನೂರ ಅರವತ್ತ ನಾಲ್ಕು ಮಾತ್ರ)ಗಳ ಪೈಕಿ ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ರೂ.8,97,83,077–00 (ರೂಪಾಯಿ ಎಂಟು ಕೋಟಿ ತೊಂಬತ್ತೇಳು ಲಕ್ಷದ ಎಂಬತ್ಮೂರು ಸಾವಿರದ ಎಪ್ಪತ್ತೇಳು ಮಾತ್ರ)ಗಳನ್ನು ಪಾವತಿಸಲು ಹಾಗೂ ಮುಂದಿನ 01 ವರ್ಷದ ಅವಧಿಗೆ ಕರಾರನ್ನು ನವೀಕರಣ ಮಾಡಲು ಕ್ರಮ ಕೈಗೊಳ್ಳುವಂತೆ ಸಭೆಯು ತೀರ್ಮಾನಿಸಿತು. |

| | | | |
|---|---|---|---|
| ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | | | |
| 7. | 2021-22.ಸಾ.ಸಿಂ.06 ಸಾ&ಅ-01 | ತುಮಕೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಜಾಹೀರಾತು ನೀಡಿರುವ ದಿನಪತ್ರಿಕೆಗಳ ಪ್ರಕಟಣೆಗೆ ತಗುಲಿದ ವೆಚ್ಚ ರೂ. 7,44,684/- ಗಳ ಮಂಜೂರಾತಿ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಜಾಹೀರಾತು ನೀಡಿದ್ದು, ಈ ಸಂಬಂಧ ಜಾಹೀರಾತಿಗಾಗಿ ವೆಚ್ಚವಾಗಿರುವ ಮೊತ್ತ ರೂ.7,44,684.00 (ರೂಪಾಯಿ ಏಳು ಲಕ್ಷದ ನಲವತ್ತ ನಾಲ್ಕು ಸಾವಿರದ ಆರು ನೂರ ಎಂಭತ್ತ ನಾಲ್ಕು ಮಾತ್ರ)ಗಳನ್ನು ಮೆ. ಅವಂತಿ ಅಡ್ವಟೈಸಿಂಗ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ನಿಯಮಾನುಸಾರ ಪಾವತಿಸಲು ಸಭೆಯು ತೀರ್ಮಾನಿಸಿತು. |
| 8. | 2021-22.ಸಾ.ಸಿಂ.06 ಸಾ&ಅ-02 | ಪೂರ್ಣಕಾಲಿಕ ಪಿಹೆಚ್.ಡಿ ಸಂಶೋಧನಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಹಾಸ್ಟಲ್ ಸೌಲಭ್ಯ ಹಾಗೂ ವಾರ್ಷಿಕ ಸಾದಿಲ್ವಾರು ವೆಚ್ಚ ಒದಗಿಸಿಕೊಡುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು 2021-22ನೇ ಸಾಲಿನಿಂದ ಮಾಹೆಯಾನ ಶಿಷ್ಯವೇತನ ರೂ.8000/- ಗಳ ಹಿಂಭಾಕಿ ಹಾಗೂ ದಿನಾಂಕ:01.06.2022 ರಿಂದ ಮಾಹೆಯಯಾನ ರೂ.12000/- ಗಳ ಶಿಷ್ಯವೇತನವನ್ನು ಮಂಜೂರು ಮಾಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಅಂಗೀಕರಿಸಿತು, ಮುಂದುವರೆದು ಹಾಸ್ಟೆಲ್ ಸೌಲಭ್ಯದ ಕುರಿತು ಆಡಳಿತದ ಹಂತದಲ್ಲಿ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 9. | 2021-22.ಸಾ.ಸಿಂ.06 ಸಾ&ಅ-03 | ತುಮಕೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ಕಂಪ್ಯೂಟರ್ ಆಪರೇಟರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರವೀಣ್ ಕುಮಾರ್ ಟಿ ಇವರ ಸೇವೆಯನ್ನು ಮುಂದುವರೆಸಿರುವ ಸಂಬಂಧ ಸಿಂಡಿಕೇಟ್ ಸಭೆಯ ಸ್ಥಿರೀಕರಣದ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಶ್ರೀ ಪ್ರವೀಣ್ ಕುಮಾರ್ ಟಿ ಇವರ ಸೇವೆಯನ್ನು ದಿನಾಂಕ 13.07.2022 ರಿಂದ ಅನ್ವಯವಾಗುವಂತೆ ಮುಂದಿನ ಹನ್ನೊಂದು ತಿಂಗಳಿಗೆ ಅಥವಾ ಮುಂದಿನ ಆದೇಶದವರೆಗೆ ವಿಸ್ತರಿಸಿ ದಿನಾಂಕ 10.08.2022ರಂದು ಆದೇಶಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 10. | 2021-22.ಸಾ.ಸಿಂ.06 ಸಾ&ಅ-04 | ಶ್ರೀ ರಾಜು ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಸಲ್ಲಿಸಿರುವ ಮನವಿಯಲ್ಲಿನ ಹಾಸ್ಟೆಲ್‌ಗಳ ವ್ಯವಸ್ಥೆಯ ಚರ್ಚೆ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಹಾಸ್ಟೆಲ್‌ಗೆ ಸಂಬಂಧಿಸಿದಂತೆ ಎಲ್ಲಾ ವಿಚಾರಗಳನ್ನು ಹಾಸ್ಟೆಲ್ ಸಮಿತಿಯ ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಸಭೆಯು ಇದಕ್ಕೆ ಸರ್ವಾನುಮತದಿಂದ ಒಪ್ಪಿತು. |
| 11. | 2021-22.ಸಾ.ಸಿಂ.06 ಸಾ&ಅ-05 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಗೌರವಧನ ಹೆಚ್ಚಿಸುವ ಕುರಿತು. | ಸದರಿ ವಿಷಯಕ್ಕೆ ಸಂಬಂಧಿಸಿದದಂತೆ, ಮಾನ್ಯ ಸದಸ್ಯರಾದ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್., ಶ್ರೀ ಪ್ರಸನ್ನಕುಮಾರ್, ಶ್ರೀ ರಾಜು, ಶ್ರೀ ವಿನಯ್ ಟಿ.ಡಿ. ಹಾಗೂ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ರವರು ವೇತನ ಹೆಚ್ಚಳದ ಕುರಿತು ಸಭೆಗೆ |

| | | | |
|---|---|---|---|
| | | | ತಿಳಿಸಿದರು, ಸದರಿ ವಿಷಯದ ಕುರಿತು ಕೂಲಂಕಷವಾಗಿ ಚರ್ಚಿಸಿದ ಸಭೆಯು ಕೆಳಕಂಡಂತೆ<br>NET/SLET/Ph.D ಹೊಂದಿದವರಿಗೆ 35,000/- (ಪೂರ್ಣಕಾಲಿಕ)<br>NET/SLET/Ph.D ಹೊಂದಿಲ್ಲದವರಿಗೆ 28,000/- (ಪೂರ್ಣಕಾಲಿಕ)<br>ನಿವೃತ್ತ ಪ್ರಾಧ್ಯಾಪಕರಿಗೆ ಮಾಹೆಯಾನ ಯು.ಜಿ.ಸಿ. ನಿಗದಿಪಡಿಸಿರುವ ಗೌರವಧನ ರೂ. 40,000/- ಅತಿಥಿ ಉಪನ್ಯಾಸಕರ ಗೌರವಧನ ನಿಗದಿಪಡಿಸಲು ತೀರ್ಮಾನಿಸಿತು. |
| | | **ಪರೀಕ್ಷಾ ವಿಭಾಗ** | |
| 12. | 2021-22.ಸಾ.ಸಿಂ.06 ಪ.ವಿ.-01 | ಬೋನೋಫೈಡ್ ಪ್ರಮಾಣ ಪತ್ರದ ನಮೂನೆ, ಶುಲ್ಕ ಹಾಗೂ ಈಗಾಗಲೇ ತಾತ್ಕಾಲಿಕ ಪದವಿ ಪ್ರಮಾಣ ಪತ್ರ ವಿತರಿಸಲು ಉಪಯೋಗಿಸಲಾಗುತ್ತಿರುವ ಅರ್ಜಿಯನ್ನೇ ಬೋನೋಫೈಡ್ ಪ್ರಮಾಣ ಪತ್ರಕ್ಕೆ ಉಪಯೋಗಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು. | ಬೋನೋಫೈಡ್ ಪ್ರಮಾಣ ಪತ್ರದ ನಮೂನೆ, ಶುಲ್ಕ ಹಾಗೂ ಈಗಾಗಲೇ ತಾತ್ಕಾಲಿಕ ಪದವಿ ಪ್ರಮಾಣ ಪತ್ರ ವಿತರಿಸಲು ಉಪಯೋಗಿಸಲಾಗುತ್ತಿರುವ ಅರ್ಜಿಯನ್ನೇ ಬೋನೋಫೈಡ್ ಪ್ರಮಾಣ ಪತ್ರಕ್ಕೆ ಉಪಯೋಗಿಸುವ ಕುರಿತು ಚರ್ಚಿಸಿದ ಸಭೆಯು ಮಂಗಳೂರು ವಿಶ್ವವಿದ್ಯಾನಿಲಯದ ಮಾದರಿಯನ್ನು ಅನುಸರಿಸಿ ತುಮಕೂರು ವಿಶ್ವವಿದ್ಯಾನಿಲಯವು ಸಿದ್ಧಪಡಿಸಿರುವ ಮಾದರಿ ನಮೂನೆಯನ್ನು ಅನುಮೋದಿಸಿತು ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಬೋನೋಫೈಡ್ ಪ್ರಮಾಣ ಪತ್ರಕ್ಕೆ ರೂ.500/- (ರೂಪಾಯಿ ಐದುನೂರು ಮಾತ್ರ) ಗಳ ಶುಲ್ಕವನ್ನು ನಿಗದಿಪಡಿಸಿರುವ ವಿದ್ಯಾವಿಷಯಕ ಪರಿಷತ್ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 13. | 2021-22.ಸಾ.ಸಿಂ.06 ಪ.ವಿ.-02 | ಶ್ರೀ ಎನ್. ಆರ್ ಪ್ರಭಾಕರ ರವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸಿರುವ ಕುರಿತು. | ಶ್ರೀ ಎನ್. ಆರ್ ಪ್ರಭಾಕರ ಇವರ ತಾತ್ಕಾಲಿಕ ಡಿ.ಲಿಟ್ ಪದವಿ ಕುರಿತು ಚರ್ಚಿಸಿದ ಸಭೆಯು ಈ ಸಂಬಂಧ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸಲು ಸರ್ವಾನುಮತದಿಂದ ಅನುಮತಿಸಿತು. |
| 14. | 2021-22.ಸಾ.ಸಿಂ.06 ಪ.ವಿ.-03 | 2022ರ ಮಾರ್ಚ್ / ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆ ಮೊತ್ತ ಪಾವತಿಸುವ ಕುರಿತು. | 2022ರ ಮಾರ್ಚ್ / ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಮೆ. ಗುರು ಟ್ರಾವೆಲ್ಸ್, ತುಮಕೂರು ಇವರಿಂದ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆ ಮೊತ್ತ ರೂ.4,45,123.00 (ರೂಪಾಯಿ ನಾಲ್ಕು ಲಕ್ಷದ ನಲವತ್ತೈದು ಸಾವಿರದ ಒಂದು ನೂರು ಇಪ್ಪತ್ತ ಮೂರು) ಮಾತ್ರಗಳನ್ನು ದಿನಾಂಕ 19.07.2021 ರಂದು ಮಾಡಿಕೊಂಡಿರುವ ದರ ಕರಾರು |

| | | | |
|---|---|---|---|
| | | | ಒಪ್ಪಂದದನ್ವಯ ನಿಯಮಾನುಸಾರ ಪಾವತಿಸಲು ಸಭೆಯು ಅನುಮತಿಸಿ ನಿರ್ಣಯಿಸಿತು. |
| 15. | 2021-22.ಸಾ.ಸಿಂ.06 ಪ.ವಿ.-04 | 2022ರ ಮೇ / ಜೂನ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆ ಮೊತ್ತ ಪಾವತಿಸುವ ಕುರಿತು. | 2022ರ ಮೇ / ಜೂನ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಮೆ. ಗುರು ಟ್ರಾವೆಲ್ಸ್, ತುಮಕೂರು ಇವರಿಂದ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆ ಮೊತ್ತ ರೂ.3,43,096.00 (ರೂಪಾಯಿ ಮೂರು ಲಕ್ಷದ ನಲವತ್ತ ಮೂರು ಸಾವಿರದ ತೊಂಬತ್ತಾರು) ಮಾತ್ರಗಳನ್ನು ದಿನಾಂಕ 19.07.2021 ರಂದು ಮಾಡಿಕೊಂಡಿರುವ ದರ ಕರಾರು ಒಪ್ಪಂದದನ್ವಯ ನಿಯಮಾನುಸಾರ ಪಾವತಿಸಲು ಸಭೆಯು ಅನುಮತಿಸಿ ನಿರ್ಣಯಿಸಿತು. |
| 16. | 2021-22.ಸಾ.ಸಿಂ.06 ಪ.ವಿ.-05 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು 2022 ರ ಏಪ್ರಿಲ್/ಮೇ ನಡೆದ ವಿವಿಧ ಸ್ನಾತಕೋತ್ತರ ಮತ್ತು ಮೇ / ಜೂನ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ಸಂಬಂಧ ದರ ಕರಾರು ಒಪ್ಪಂದ ಮಾಡಿಕೊಂಡಿರುವ ಸಂಸ್ಥೆಗೆ ರೂ.9,56,793.00 (ರೂಪಾಯಿ ಒಂಭತ್ತು ಲಕ್ಷದ ಐವತ್ತಾರು ಸಾವಿರದ ಏಳು ನೂರ ತೊಂಭತ್ತ ಮೂರು) ಮಾತ್ರಗಳನ್ನು ಪಾವತಿಲು ಸಭೆಯು ನಿರ್ಣಯಿಸಿತು. |
| 17. | 2021-22.ಸಾ.ಸಿಂ.06 ಪ.ವಿ.-06 | 2022-23ನೇ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ ಮಾಡಿಕೊಂಡಿರುವ ಕರಾರು ಒಪ್ಪಂದದ ಸ್ಥಿರೀಕರಣಕ್ಕಾಗಿ ಕೋರಿಕೆ. | 2022-23ನೇ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ ದಿನಾಂಕ 24.06.2022ರಿಂದ ದಿನಾಂಕ 23.06.2023ರ ಒಂದು ವರ್ಷದ ಅವಧಿಗೆ ಮಾಡಿಕೊಂಡಿರುವ ಕರಾರು ಒಪ್ಪಂದದ ಕುರಿತು ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| **ಹೆಚ್ಚುವರಿ ಕಾರ್ಯಸೂಚಿಗಳು** | | | |
| **ಸಿಬ್ಬಂದಿ ವಿಭಾಗ** | | | |
| 18. | 2021-22.ಸಾ.ಸಿಂ.06 ಸಿ.ವಿ-05 | ಯು.ಜಿ.ಸಿ 2018ರ ನಿಯಮಾವಳಿಗಳ ಆಧಾರದ ಮೇಲೆ ಸರ್ಕಾರದ ವತಿಯಿಂದ ಸಲ್ಲಿಸಿರುವ ಮಾದರಿ ಪರಿನಿಯಮದನ್ವಯ ರಚಿಸಿರುವ ಪರಿನಿಯಮದ ಕುರಿತು. | ಯು.ಜಿ.ಸಿ 2018ರ ನಿಯಮಾವಳಿಗಳ ಆಧಾರದ ಮೇಲೆ ಸರ್ಕಾರದ ವತಿಯಿಂದ ಸಲ್ಲಿಸಿರುವ ಮಾದರಿ ಪರಿನಿಯಮದನ್ವಯ ರಚಿಸಿರುವ ಪರಿನಿಯಮಾವಳಿಯನ್ನು ವಿದ್ಯಾವಿಷಯಕ ಪರಿಷತ್ತು ಕೂಲಂಕಷವಾಗಿ |

| | | | |
|---|---|---|---|
| | | | ಪರಿಶೀಲಿಸಿ ಅನುಮೋದಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 19. | 2021-22.ಸಾ.ಸಿಂ.06 ಸಿ.ವಿ-06 | ಅಕಾಲಿಕ ನಿಧನರಾದ ಡಾ. ಶಿವಾನಂದ ಎಂ.ಕೆ ಸಹಾಯಕ ಪ್ರಾಧ್ಯಾಪಕರು ಇವರ ಪತ್ನಿ ಶ್ರೀಮತಿ ತೇಜಸ್ವಿನಿ ಎಸ್. ಇವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ ಮನವಿ ಸಲ್ಲಿಸಿರುವ ಕುರಿತು. | ಅಕಾಲಿಕ ನಿಧನರಾದ ಡಾ. ಶಿವಾನಂದ ಎಂ.ಕೆ ಸಹಾಯಕ ಪ್ರಾಧ್ಯಾಪಕರು ಇವರ ಪತ್ನಿ ಶ್ರೀಮತಿ ತೇಜಸ್ವಿನಿ ಎಸ್. ಇವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಎದುರಾಗಿ ಸರ್ಕಾರದ ನಿಯಮಾನುಸಾರ ಕ್ರಮವಹಿಸಲು ಸಭೆಯು ತೀರ್ಮಾನಿಸಿತು. |
| | | **ಕಾಲೇಜು ಅಭಿವೃದ್ಧಿ ಪರಿಷತ್ತು ವಿಭಾಗ** | |
| 20. | 2021-22. ಸಾ.ಸಿಂ-06 ಕಾ.ಅ.ಪ.-01 | ಕೋಳಾಲದ ಚನ್ನಮ್ಮ ಪ್ರಥಮ ದರ್ಜೆ ಕಾಲೇಜಿನ 2022-23ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣ ಸಂಬಂಧ ಮರುತಪಾಸಣೆಯ ವರದಿಯ ಕುರಿತು. | 2022-23ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣದ ಸಂಬಂಧ ಚನ್ನಮ್ಮ ಪ್ರಥಮ ದರ್ಜೆ ಕಾಲೇಜು, ಕೋಳಾಲ, ಈ ಕಾಲೇಜಿಗೆ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಮರು ತಪಾಸಣೆ ನಡೆಸಿ ವರದಿಯಲ್ಲಿ ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿರುವುದನ್ನು ಅನುಮೋದಿಸಿ ಸದರಿ ಸಾಲಿಗೆ ಸಂಯೋಜನೆ ನವೀಕರಣ ಮಾಡಲು ಅನುಮತಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 21. | 2021-22. ಸಾ.ಸಿಂ-06 ಕಾ.ಅ.ಪ.-02 | ಶಿರಾದ ಶ್ರೀ ರಂಗನಾಥ ಪ್ರಥಮ ದರ್ಜೆ ಕಾಲೇಜಿನ 2022-23ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣ ಸಂಬಂಧ ಮರುತಪಾಸಣೆಯ ವರದಿಯ ಕುರಿತು. | 2022-23ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣದ ಸಂಬಂಧ ಶ್ರೀ ರಂಗನಾಥ ಪ್ರಥಮ ದರ್ಜೆ ಕಾಲೇಜು, ಶಿರಾ ಈ ಕಾಲೇಜಿಗೆ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಮರು ತಪಾಸಣೆ ನಡೆಸಿ ವರದಿಯಲ್ಲಿ ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿರುವುದನ್ನು ಅನುಮೋದಿಸಿ ಸದರಿ ಸಾಲಿಗೆ ಸಂಯೋಜನೆ ನವೀಕರಣ ಮಾಡಲು ಅನುಮತಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 22. | 2021-22. ಸಾ.ಸಿಂ-06 ಕಾ.ಅ.ಪ.-03 | ಕುಣಿಗಲ್‌ನ ಹೋಲಿ ಟ್ರಿನಿಟಿ ಕಾಲೇಜಿನ 2022-23ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣ ಸಂಬಂಧ ಮರುತಪಾಸಣೆಯ ವರದಿಯ ಕುರಿತು. | 2022-23ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣದ ಸಂಬಂಧ ಹೋಲಿ ಟ್ರಿನಿಟಿ ಕಾಲೇಜು, ಕುಣಿಗಲ್ ಈ ಕಾಲೇಜಿಗೆ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಮರು ತಪಾಸಣೆ ನಡೆಸಿ ವರದಿಯಲ್ಲಿ ಸಂಯೋಜನೆ |

| | | | |
|---|---|---|---|
| | | | ನವೀಕರಣಕ್ಕೆ ಶಿಫಾರಸ್ಸು ಮಾಡಿರುವುದನ್ನು ಅನುಮೋದಿಸಿ ಸದರಿ ಸಾಲಿಗೆ ಸಂಯೋಜನೆ ನವೀಕರಣ ಮಾಡಲು ಅನುಮತಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | | **ಶೈಕ್ಷಣಿಕ ವಿಭಾಗ** | |
| 23. | 2021-22ಸಾ.ಸಿಂ-06 ಶೈ.ವಿ.-01 | ಉರ್ದು ವಿಷಯವನ್ನು ಐಚ್ಛಿಕ ವಿಷಯವಾಗಿ ಅನುಷ್ಠಾನಗೊಳಿಸುವಂತೆ ಕೋರಿರುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಈ ಕುರಿತು ಮುಂಬರುವ ದಿನಗಳಲ್ಲಿ ಅನುಷ್ಠಾನಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 24. | 2021-22ಸಾ.ಸಿಂ-06 ಶೈ.ವಿ.-02 | ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ (ಎಂ.ಎಸ್ಸಿ-ಜೈವಿಕ ತಂತ್ರಜ್ಞಾನ) ವಿಷಯದ ನೂತನ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ (ಎಂ.ಎಸ್ಸಿ-ಜೈವಿಕ ತಂತ್ರಜ್ಞಾನ) ವಿಷಯದ ನೂತನ ಪಠ್ಯಕ್ರಮವನ್ನು ಅನುಮೋದಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 25. | 2021-22ಸಾ.ಸಿಂ-06 ಶೈ.ವಿ.-03 | ಎಂ.ಎಸ್. ಕಮ್ಯೂನಿಕೇಷನ್ ಶಿರೋನಾಮೆ (ನಾಮಿನ್‌ಕ್ಲೇಚರ್) ಬದಲಾವಣೆ ಮತ್ತು ಸದರಿ ಕೋರ್ಸ್‌ನ್ನು ಕಲಾ ನಿಕಾಯಕ್ಕೆ ಸೇರಿಸುವುದರ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಯು.ಜಿ.ಸಿ. ಪತ್ರದನ್ವಯ ಶಿರೋನಾಮೆ ಬದಲಾವಣೆ ಮಾಡಲು ಹಾಗೂ ಕಲಾ ನಿಕಾಯಕ್ಕೆ ಸೇರಿಸಲು ತೀರ್ಮಾನಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 26. | 2021-22ಸಾ.ಸಿಂ-06 ಶೈ.ವಿ.-04 | ಸ್ನಾತಕೋತ್ತರ ಎಂ.ಸಿ.ಎ ವಿಭಾಗದ 6ನೇ ಮತ್ತು 4ನೇ ಸೆಮಿಸ್ಟರ್‌ನ Major Project ಗೆ ಸಂಬಂಧಿಸಿದಂತೆ Project Marks Distribution ಅನ್ನು ಪರಿಷ್ಕರಿಸಿ ಸಲ್ಲಿಸುತ್ತಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಎಂ.ಸಿ.ಎ ಕೋರ್ಸಿನ 4ನೇ ಮತ್ತು 6ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ Major Project ಗೆ ಸಂಬಂಧಿಸಿದಂತೆ Project Marks Distribution ಅನ್ನು ಪರಿಷ್ಕರಿಸಿರುವಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ವಿದ್ಯಾವಿಷಕ ಪರಿಷತ್ತು ಸಭೆಯು ಅನುಮೋದಿಸಿರುವ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 27. | 2021-22ಸಾ.ಸಿಂ-06 ಶೈ.ವಿ.-05 | ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚಿಸಿರುವ ಕ್ರಮದ ಸ್ಥಿರೀಕರಣದ ಕುರಿತು. | ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ವಿದ್ಯಾವಿಷಯಕ ಪರಿಷತ್ತು ಸಭೆಯು ಅನುಮೋದಿಸಿರುವ ಹಾಗೂ ಅಧ್ಯಯನ |

| | | | |
|---|---|---|---|
| | | | ಮಂಡಳಿಗಳನ್ನು ರಚಿಸುವಾಗ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಒಳಗೊಂಡಂತೆ 1+5 ಮಾದರಿಯಲ್ಲಿ ಸಮಿತಿಯನ್ನು ರಚಿಸುವಂತೆ ತೀರ್ಮಾನಿಸಿರುವ ವಿದ್ಯಾವಿಷಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 28. | 2021–22ಸಾ.ಸಿಂ–06 ಶೈ.ವಿ.–06 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಜೈನ ಅಧ್ಯಯನ ವಿಭಾಗದ ಸ್ಥಾಪನ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಜೈನ ಅಧ್ಯಯನ ವಿಭಾಗದ ಬದಲಿಗೆ ಜೈನ್ ಸಾಹಿತ್ಯ ಮತ್ತು ತತ್ವಶಾಸ್ತ್ರ (Jain Philosophy and Literature) ಕೋರ್ಸಿನ ಕುರಿತು ವಿವಿಧ ವಿಶ್ವವಿದ್ಯಾನಿಲಯಗಳಿಂದ ಮಾಹಿತಿ ಪಡೆದು ಡಿಪ್ಲೋಮಾ ಕೋರ್ಸ್ ಪ್ರಾರಂಭಿಸುವಂತೆ ನಿರ್ಣಯದ ಜೊತೆಗೆ ಸರ್ಟಿಫಿಕೇಟ್ ಕೋರ್ಸ್ ಅನ್ನು ಪ್ರಾರಂಭಿಸುವ ಸಂಬಂಧ ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| | | **ಖರೀದಿ ಕೋಶ** | |
| 29. | 2021–22.ಸಾ.ಸಿಂ.06 ಖ.ಕೋಶ.–01 | ಸ್ನಾತಕೋತ್ತರ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಖರೀದಿ ಸಮಿತಿಯ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | **ಪರೀಕ್ಷಾ ವಿಭಾಗ** | |
| 30. | 2021–22.ಸಾ.ಸಿಂ.06 ಪ.ವಿ.–07 | 2015–16ನೇ ಶೈಕ್ಷಣಿಕ ಸಾಲಿನಿಂದ ಇಲ್ಲಿಯವರೆಗೆ ಅಧ್ಯಯನ ಮಾಡಿರುವ ಬಿ.ಇಡಿ. ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮ ವಿನಿಯಮದಂತೆ ಅಂಕಪಟ್ಟಿ ವಿತರಣೆ ಮಾಡುವ ಕುರಿತು. | ಸದರಿ ವಿಷಯದ ಕುರಿತು ದಿನಾಂಕ 06.08.2022ರಂದು ಸಮಿತಿಯು ಸಭೆ ನಡೆಸಿ ಸಲ್ಲಿಸಿರುವ ವರದಿಯ ಕೂಲಂಕಷವಾಗಿ ಚರ್ಚಿಸಿದ ಸಭೆಯು ಸಮಿತಿಯು ಮಾಡಿರುವ ಶಿಫಾರಸ್ಸಿನಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ವಿದ್ಯಾರ್ಥಿಗಳಿಂದ ಪಡೆಯದೇ, ಉಳಿದಂತೆ ಸಮಿತಿಯ ಶಿಫಾರಸ್ಸಿನನ್ವಯ ಕೈಗೊಳ್ಳಲು ನಿರ್ಣಯಿಸಿರುವ ವಿದ್ಯಾವಿಷಯಕ ಪರಿಷತ್ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | | **ಇಂಜಿನಿಯರಿಂಗ್ ವಿಭಾಗ** | |
| 31. | 2021–22.ಸಾ.ಸಿಂ.06 ಇಂ.ವಿ–03 | ತಿಪಟೂರು ಸ್ನಾತಕೋತ್ತರ ಕೇಂದ್ರದಲ್ಲಿ ಶೈಕ್ಷಣಿಕ ಭವನ (Academic Block) ಮತ್ತು ಮುಖ್ಯದ್ವಾರ, ಭದ್ರತಾ ಕೊಠಡಿ, ಒಳಭಾಗದ ರಸ್ತೆ ಹಾಗೂ ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ತಿಪಟೂರು ಸ್ನಾತಕೋತ್ತರ ಕೇಂದ್ರದಲ್ಲಿ ಶೈಕ್ಷಣಿಕ ಭವನ (Academic Block) ಮತ್ತು ಮುಖ್ಯದ್ವಾರ, ಭದ್ರತಾ ಕೊಠಡಿ, ಒಳಭಾಗದ ರಸ್ತೆ ಹಾಗೂ ಇನ್ನಿತರೆ |

| | | | |
|---|---|---|---|
| | | | ಅಭಿವೃದ್ಧಿ ಕಾಮಗಾರಿಗಳ ಕುರಿತು ಚರ್ಚಿಸಿದ ಸಭೆಯು ಈ ಸಂಬಂಧ ಸಿದ್ದಪಡಿಸಿರುವ ನೀಲನಕ್ಷೆ ಹಾಗೂ ಅಂದಾಜು ಪಟ್ಟಿಗಳನ್ನು ಅನುಮೋದಿಸಿತು.<br>ಕಾಮಗಾರಿ ಸಂಬಂಧ ಆಯವ್ಯಯದಲ್ಲಿ ನಿಗದಿಪಡಿಸಿರುವ ರೂ. 3.00 ಕೋಟಿ ಅನುದಾನವು ಜಿ.ಎಸ್.ಟಿ. ಯಿಂದ ಹೊರತಾಗಿರುತ್ತದೆ. ಸದರಿ ಜಿ.ಎಸ್.ಟಿ. ಮೊತ್ತವನ್ನು ಇತರೆ ವೆಚ್ಚಗಳಿಂದ ಭರಿಸಿಕೊಳ್ಳಲು ಅನಮೋದಿಸಿತು. ಮುಂದುವರೆದು, ನಿಗದಿತ ರೂ.3.00 ಕೋಟಿ ಟೆಂಡರ್‌ನಲ್ಲಿ ಕಡಿಮೆ ಮೊತ್ತದ ಟೆಂಡರ್ ನೀಡಿದಲ್ಲಿ ಕಡಿಮೆ ಮೊತ್ತಕ್ಕೆ ಸಮಾನವಾಗಿ ಇತರೆ ಅಭಿವೃದ್ಧಿ ಕಾಮಗಾರಿಯನ್ನು ತಿಪಟೂರು ಕ್ಯಾಂಪಸ್‌ನಲ್ಲಿ ನಿರ್ವಹಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ಸಭೆಯು ಒಪ್ಪಿತು.<br>ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳುವ ಸಂಬಂಧ ಅಲ್ಪಾವಧಿ ಟೆಂಡರ್ ಆಹ್ವಾನಿಸಿ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿಯನ್ನು ಸೆಪ್ಟೆಂಬರ್ -20 ರೊಳಗೆ ಪ್ರಾರಂಭಿಸಲು ಇಂಜಿನಿಯರಿಂಗ್ ವಿಭಾಗಕ್ಕೆ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| | | **ಪಿಹೆಚ್.ಡಿ. ವಿಭಾಗ** | |
| 32. | 2021-22.ಸಾ.ಸಿಂ.06<br>ಸಂ.ವಿ-01 | 2017ರ ಪಿಹೆಚ್.ಡಿ ವಿನಿಯಮವನ್ನು ತಿದ್ದುಪಡಿ ಮಾಡುವ ಬಗ್ಗೆ ಪರಿಶೀಲಿಸುವ ಬಗ್ಗೆ. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಮುಂಬರುವ ಸಿಂಡಿಕೇಟ್ ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲು ಸಭೆಯು ತೀರ್ಮಾನಿಸಿತು. |
| 33. | 2021-22.ಸಾ.ಸಿಂ.06<br>ಸಂ.ವಿ-02 | ಇತರೆ ಹಿಂದುಳಿದ ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಸದರಿ ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳ ಮಾಹಿತಿ ಪಡೆದು ಜೂನ್-2022ರಿಂದ ಮಾಹೆಯಾನ ರೂ.5,000/- ಗಳ ವಿದ್ಯಾರ್ಥಿ ವೇತನವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | |
| 34. | 2021-22.ಸಾ.ಸಿಂ.06<br>ಸಾ&ಅ-06 | ವಿಶೇಷ ಘಟಕ ಯೋಜನಾ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಂಶೋಧನಾ ಸಹಾಯಕರಾದ ಶ್ರೀ ಲಕ್ಷ್ಮೀ | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಶ್ರೀ ಲಕ್ಷ್ಮೀ ರಂಗಯ್ಯ ಕೆ ಎನ್ ಇವರ ಸೇವೆಯನ್ನು ದಿನಾಂಕ 30.08.2022 ರಿಂದ |

| | | | |
|---|---|---|---|
| | | ರಂಗಯ್ಯ ಕೆ ಎನ್ ಇವರ ಸೇವೆಯನ್ನು ಮುಂದುವರೆಸುವ ಕುರಿತು. | ಅನ್ವಯವಾಗುವಂತೆ ಮುಂದಿನ ಹನ್ನೊಂದು ತಿಂಗಳಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ನಿರ್ಣಯಿಸಿತು. |
| 35. | 2021-22.ಸಾ.ಸಿಂ.06 ಸಾ&ಅ-07 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ವಿನಾಯಕ ದಾಮೋದರ್ ಸಾವರ್ಕರ್ ಅಧ್ಯಯನ ಪೀಠವನ್ನು ಸ್ಥಾಪಿಸುವಂತೆ ಶ್ರೀ ಟಿ.ಡಿ. ವಿನಯ್ ರವರು ಸಲ್ಲಿಸಿರುವ ಮನವಿಯ ಕುರಿತು | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ವಿನಾಯಕ ದಾಮೋದರ್ ಸಾವರ್ಕರ್ ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತು ಶ್ರೀ ಟಿ.ಡಿ. ವಿನಯ್, ಮಾನ್ಯ ಸಿಂಡಿಕೇಟ್ ಸದಸ್ಯರು ಸಭೆಗೆ ಮಂಡಿಸಿರುವ ಮನವಿಯ ಕುರಿತು ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಮಾನ್ಯ ಸಿಂಡಿಕೇಟ್ ಸದಸ್ಯರು ಅನುಮೋದಿಸಿರುವುದನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು ಸದರಿ ಅಧ್ಯಯನ ಪೀಠವನ್ನು ಸ್ಥಾಪಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಮಾನ್ಯ ಎಲ್ಲಾ ಸಿಂಡಿಕೇಟ್ ಸದಸ್ಯರುಗಳ ಸರ್ವಾನುಮತದಿಂದ ತೀರ್ಮಾನಿಸಿದರು.<br>ಸದರಿ ಅಧ್ಯಯನ ಪೀಠಕ್ಕೆ ಶ್ರೀ ಟಿ.ಡಿ. ವಿನಯ್, ಸಿಂಡಿಕೇಟ್ ಸದಸ್ಯರು ರೂ. 1.00 ಲಕ್ಷಗಳ ಅನುದಾನವನ್ನು ಸದರಿ ಅಧ್ಯಯನ ಪೀಠದ ಸ್ಥಾಪನೆಗಾಗಿ ದಿನಾಂಕ 26.08.2022 ರಂದು ಧನಾದೇಶದ ಮೂಲಕ ಮಾನ್ಯ ಕುಲಪತಿಗಳಿಗೆ ನೀಡಿದರು. ಮುಂದುವರೆದು, ಸಿಂಡಿಕೇಟ್ ಸದಸ್ಯರಾದ ಶ್ರೀ ಪ್ರಸನ್ನಕುಮಾರ್ ಹೆಚ್. ಇವರು ಸದರಿ ಸಾವರ್ಕರ್ ಪೀಠಕ್ಕೆ ರೂ. 25,000/- ಗಳನ್ನು ವೈಯಕ್ತಿಕವಾಗಿ ನೀಡುವುದಾಗಿ ತಿಳಿಸಿದರು. |

| | | | |
|---|---|---|---|
| ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. | Sunil Prasad T.S | ಡಾ. ಕೇಶವ, ಹಿರಿಯ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | [signature] |
| ಶ್ರೀ ಪ್ರಸನ್ನಕುಮಾರ್ | [signature] | ಡಾ. ಪಾಟೀಲ್ ಮಲ್ಲಿಕಾರ್ಜುನ ಬಿ. ಪ್ರಾಧ್ಯಾಪಕರು | [signature] |
| ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ | Bhs | ಕುಲಸಚಿವರು (ಪರೀಕ್ಷಾಂಗ) | [signature] |
| ಶ್ರೀ ರಾಜು | [signature] | ಹಣಕಾಸು ಅಧಿಕಾರಿಗಳು | [signature] |
| ಶ್ರೀ ಟಿ.ಡಿ. ವಿನಯ್ | [signature] | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | Jayamma |

[signature] 26/8/22
ಮಾನ್ಯ ಕುಲಸಚಿವರು

[signature] 26/8/22
ಮಾನ್ಯ ಕುಲಪತಿಗಳು